(ಇಂದು ದಿನಾಂಕ 10-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಆರ್.ವಿ.ಬಿ. ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅದನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ನಾನು ಸಹಿ ಹಾಕಿರುತ್ತೇನೆ.

ಅರ್ಜಿದಾರರರಿಗೆ ಸಂಬಂಧಪಟ್ಟಂತೆ ನಾನು ಅಂಗನ್ಯೂನತಾ ಪ್ರಮಾಣಪತ್ರ ನೀಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ. 15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು, 4 ಎಕ್ಸರೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದ**

ನಾನು ಅರ್ಜಿದಾರರಿಗೆ ಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿ. ನಾನು ಕೇವಲ ಕ್ಲೀನಿಕಲ್ ಪರೀಕ್ಷೆ ಮಾಡಿ ಅರ್ಜಿದಾರರರ ಕೋರಿಕೆಯ ಮೇರೆಗೆ ಅಂಗನ್ಯೂನತಾ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿ. ಅಂಗನ್ಯೂನತಾ ಪ್ರಮಾಣಪತ್ರ ನೀಡುವ ಮುಂಚೆ ನಾನು ತೇಜಸ್ವಿನಿ ಆಸ್ಪತ್ರೆಯ ಡಿಸ್ಚಾರ್ಜ ಸಮ್ಮರಿಯನ್ನು ನೋಡಿದ್ದೇನೆ. ಅರ್ಜಿದಾರರು ಸಂಪೂರ್ಣ ಚಿಕಿತ್ಸೆಯನ್ನು ತೇಜಸ್ವಿನಿ ಆಸ್ಪತ್ರೆ, ಮಂಗಳೂರಿನಲ್ಲಿ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಆಸ್ಪತ್ರೆಯ ದಾಖಲಾತಿಯ ಪ್ರಕಾರ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ತೇಜಸ್ವಿನಿ ಆಸ್ಪತ್ರೆಯವರು ಯಾವ ಕಾರಣಕ್ಕಾಗಿ ಅಂಗನ್ಯೂನತಾ ಪ್ರಮಾಣಪತ್ರ ಕೊಟ್ಟಿಲ್ಲ ಎಂದು ಅರ್ಜಿದಾರ ನನಗೆ ಹೇಳಿಲ್ಲ ಎಂದರೆ ಸರಿ. ಸಂಪೂರ್ಣವಾಗಿ ಚಿಕಿತ್ಸೆಯನ್ನು ತೇಜಸ್ವಿನಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿದ್ದರಿಂದ ಸದರಿ ಆಸ್ಪತ್ರೆಯವರು ಅಂಗನ್ಯೂನತಾ ಪ್ರಮಾಣಪತ್ರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಅಂಗನ್ಯೂನತಾ

ಪ್ರಮಾಣಪತ್ರವನ್ನು ಗೆಜೆಟ್‌ನಲ್ಲಿ ನಮಗೆ ಬಂದಂತಹ ನಿಯಮಗಳ ಪ್ರಕಾರ ಕೊಟ್ಟಿದ್ದೇವೆ. ಅರ್ಜಿದಾರಾರಿಗೆ ಆದಂತಹ ಮೂಳೆ ಮುರಿತ ಕೂಡಿಕೊಂಡಿದೆ ಎಂದರೆ ಸರಿ. ಅರ್ಜಿದಾರರು ಯಾವ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.15 ನಮಗೆ ಕೊಟ್ಟಂತಹ ಗೈಡಲೈನ್ಸ್ ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಧನ ಬರಲಿ ಎಂದು ಹೆಚ್ಚಿನ ಪ್ರಮಾಣದಲ್ಲಿ ಅಂಗನ್ಯೂನತೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ದಿನ ಅರ್ಜಿದಾರರು ನ್ಯಾಯಾಲಯಕ್ಕೆ ಬಂದಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಅಂಗನ್ಯೂನತಾ ಪ್ರಮಾಣಪತ್ರವನ್ನು ನೀಡಿದ ದಿನಾಂಕವನ್ನು ನಿ.ಪಿ.15 ರಲ್ಲಿ ನಮೂದಿಸಿಲ್ಲ. ಯಾವ ದಿನಾಂಕದಂದು ನಿ.ಪಿ.15 ನ್ನು ಕೊಟ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ, ಸಾಕ್ಷಿ ಮುಂದುವರಿದು 2-3 ತಿಂಗಳು ಆಗಿರಬಹುದು ಎಂದು ಹೇಳುತ್ತಾರೆ. ನಿ.ಪಿ.18 ನ್ನು ಈಗ 2-3 ದಿನದ ಹಿಂದೆ ತೆಗೆಯಲಾಗಿದೆ. ನನಗೆ ಸಾಕ್ಷಿ ಹೇಳಲು ಸಮನ್ಸ್ ಬಂದಿದ್ದರಿಂದ ಗಾಯದ ಪ್ರಮಾಣದ ಬಗ್ಗೆ ಹೇಳುವ ಸಲುವಾಗಿ ನಿ.ಪಿ.18 ನ್ನು ತೆಗೆದಿದ್ದೇನೆ. 2-3 ತಿಂಗಳ ಹಿಂದೆ ಅಂಗನ್ಯೂನತಾ ಪ್ರಮಾಣಪತ್ರ ನೀಡುವ ಸಮಯದಲ್ಲಿ ಎಕ್ಸರೆ ತೆಗೆದಿದ್ದೇವೆ. ಆ ಸಮಯದಲ್ಲಿ ನಾನು ಎಕ್ಸರೆ ತೆಗೆಯದೇ ಇದ್ದುದರಿಂದ ಅದನ್ನು ಸರಿಪಡಿಸುವ ಉದ್ದೇಶದಿಂದ ನಿ.ಪಿ.18 ನ್ನು 2-3 ದಿನದ ಹಿಂದೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಂಗನ್ಯೂನತಾ ಪ್ರಮಾಣಪತ್ರದ ಸಮಯದಲ್ಲಿ ತೆಗೆದಂತಹ ಎಕ್ಸರೆಯನ್ನು ನಮ್ಮ ಆಸ್ಪತ್ರೆಯ ಇಲಾಖೆಯಲ್ಲಿ ಇವೆ. ನಿ.ಪಿ.15 ರಲ್ಲಿ ಎಕ್ಸರೆ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ಆ ರೀತಿ ನಮೂದಿಸಲು ಅಲ್ಲಿ ಅವಕಾಶ ಇಲ್ಲ ಎಂದು ಹೇಳುತ್ತಾರೆ. ನಾನು ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ಮತ್ತು ಅರ್ಜಿದಾರನನ್ನು ಸರಿಯಾಗಿ ಪರೀಕ್ಷಿಸದೇ ಸುಳ್ಳು ಅಂಗನ್ಯೂನತಾ ಪ್ರಮಾಣಪತ್ರ ನೀಡಿದ್ದೇನೆ ಅನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಅರ್ಜಿದಾರರಿಗೆ ತೊಂದರೆ ಇವೆ ಎಂದು ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಬರೆಸಿದ್ದೇನೆ

ಅನ್ನುವುದು ಸರಿಯಲ್ಲ. ಅರ್ಜಿದಾರನು ಅಂಗನ್ಯೂನತಾ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ನಮ್ಮ ಆಸ್ಪತ್ರೆಗೆ ಬಂದಾಗ ಮತ್ತು ಈ 2 – 3 ದಿನಗಳ ಹಿಂದೆ ಆತ ಬಂದು ಎಕ್ಸರೆ ತೆಗೆದ ಬಗ್ಗೆ ದಾಖಲಾತಿಗಳು ನಮ್ಮ ಆಸ್ಪತ್ರೆಯಲ್ಲಿ ಇವೆ ಎಂದರೆ ಸರಿ. ಅರ್ಜಿದಾರನಿಗೆ ಶೇ. 72 ರಷ್ಟು ಅಂಗನ್ಯೂನತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೂಲಿ ಕೆಲಸ ಮಾಡಲು ಆತನಿಗೆ ತೊಂದರೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಳವಡಿಸಿದ ಇನಪ್ಲಾಂಟ್ಸನ್ನು ತೆಗೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆದಂತಹ ಗಾಯಗಳು ಪೂರ್ಣವಾಗಿ ಗುಣಮುಖವಾಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚಿನ ಅಂಗನ್ಯೂನತಾ ಪ್ರಮಾಣಪತ್ರ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ